Regd No B G. 155

Sri

24—7—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು — ಅಂಬಮನೆ ಸಿಂಸ್ಥೆದಾರ್ ಎಂ ಏ ಸುಬ್ಬರಾಯರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow
ಗೋಸಂರಕ್ಷಣೆ ಮಾಡಿ

ಶ್ವೇತಪತ್ರ

ಬೆಂಗಳೂರು— ವಿದ್ಯಾಭ್ಯಾಸ ಸಂಬಂಧದಲ್ಲಿ ಸರಕಾರವು ಒಂದು ಶ್ವೇತಪತ್ರ ಹೊಂಡಿಸಬಹುದೆಂದು ಹೇಳಲಾಗಿದೆ

.....

ತಟಸ್ಥ ನೀತಿ

ಕೈರೊ 22— ಆಫ್ರಿಕಾ ರಾಜ್ಯಗಳ ಮೊಖ್ಯೇಸಂಯ ನಡೆಸಿದ ಸಮ್ಮೇಳನದಲ್ಲಿ, ಆಫ್ರಿಕಾರಾಜ್ಯಗಳು ಅನುಸರಿಸುತ್ತಿರುವ ತಟಸ್ಥ ನೀತಿಯನ್ನು ಸಮರ್ಥಿಸಿದರು — ವರ್ಣಬೇಧ ನೀತಿಯ ಮೇಲೆ ಹೊಡೆದಾಡಲು ನಿರ್ಧರಿಸಲಾಯಿತು.

—

ಮುಖ್ಯ ಮಂತ್ರಿಗಳ ಪ್ರವಾಸ

ಬೆಂಗಳೂರು— ಮೈಸೂರು ಜಿಲ್ಲಾ ಗುಂಡ್ಲುಪೇಟೆ ತಾಲ್ಲೂಕು ಅಭಾವ ಕ್ಷೇತ್ರಗಳಲ್ಲಿ ಶ್ರಮವಾಸ ಮಾಡಲು ಇಲ್ಲಿಂದ ಬುಧವಾರ ಪ್ರಯಾಣಮಾಡಿದರು.

★

ಮೋಕ್ಷ ಮಾರ್ಗ

ತಿರುಚಿ — ಜನರು ಮೋಕ್ಷ ಪಡೆಯಲು ಮಂತ್ರಗಳನ್ನೂ ದೇವರ ಹೆಸರುಗಳನ್ನೂ ಪಠಿಸುತ್ತಿರಬೇಕೆಂದು ಶ್ರೀ ಅನಂತ ದೀಕ್ಷಿತರು ನುಡಿದರು

★

ಪಾಕಿಸ್ತಾನಕ್ಕೆ ಸಾಲಾ

ವಾಷಿಂಗ್ಟನ್—ಪಾಕಿಸ್ತಾನಕ್ಕೆ ಇಂಡಸ್ಸು ಬೇಸಿನ್ ಅಭಿವೃದ್ಧಿ ನಿಧಿಗೆ ಐಡಿಎ 58540000 ಡಾಲರಂ ಸಾಲ ಕೊಟ್ಟಿದೆ.

ನಾಳೆಯ ಪಂಚಾಂಗ

ಅನಂತ ಮಹಾವಿದ್ವಾನ್, ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
25 ಶನಿವಾರ ಪಾಡ್ಯ ಶ್ರವಣ

ಅಲ್ಪೀಮುಕ್ಕಳಿ ಮಾತು

ಹಾಂಕಾಂಗು— ಎಲ್ಲಾ ಕಡೆ ಮುಕ್ಕಳ ಸಾಮಾನ್ಯ ನುಡಿಯು ಅಮ್ಮಾ, ಅಪ್ಪಾವೆನ್ನುವುದಾದರೆ ಚೀನಾದಲ್ಲಿ 'ಅಧ್ಯಕ್ಷ ಮಾತ್ಸೆಟುಂ' ಎಂಬುದಾಗಿದೆಯಂತೆ: ಚುರುಕಾದ ಮಕ್ಕಳು 'ಅಧ್ಯಕ್ಷ ಮಾವೊ ಚಿರಾಯುವಾಗಿರಲಿ' 'ಕಮ್ಯೂನಿಸ್ಟು ಪಾರ್ಟಿ ಚಿರಾಯುವಾಗಿರಲಿ' ಎಂದು ಕೂಗುತ್ತವಂತೆ!

❀

ಸ್ಪೇಟು ಟ್ರೇಡಿಂಗು

ಮದಂತಸು— ಈಗ ಆಹಾರ ಧಾನ್ಯ ಬಗ್ಗೆ ಸರಕಾರವು ವ್ಯಾಪಾರ ನಡೆಸುವುದು ಸೂಕ್ತವಲ್ಲವೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

★

ಬಟ್ಟೆ ಹತ್ತೋಟಿ ಬಗ್ಗೆ

ನವದೆಹಲಿ— ಬಟ್ಟೆ ಮೇಲಿನ ಹತ್ತೋಟಿ ತೊಲಗಿಸಲು ಡೆಲ್ಲಿ ಮತ್ತು ಅಹಮದಾಬಾದು ಬಟ್ಟೆ ವ್ಯಾಪಾರಿಗಳು ಕಾಂಗ್ರೆಸ್ಸು ಅಧ್ಯಕ್ಷ ಕಾಮರಾಜರೊಂದಿಗೆ ಮಾತುಕತೆ ನಡೆಸಿದರು.

— —

ರೇಷನಿಂಗು

ಪಾಟ್ನಾ— ಬೀಹಾರಿನಲ್ಲಿ ರೇಷನಿಂಗು ಜಾರಿ ತರಲು ಸರಕಾರ ನಿರ್ಧರಿಸಿದೆ — ಈಗೆ ರಾಜ್ಯದಲ್ಲಿ 10 ಸಾವಿರ ಫೇರ ಪ್ರೈಜು ಡಿಪೋಗಳಿವೆ

—

ಲಾಕ್ ಔಟ್

ದನಬಾದ್— ಫ್ಯಾಕ್ಟರಿಯಲ್ಲಿ ವಿನಾಶಕಾರಿ ಕಾರ್ಯ ಹೆಚ್ಚಿರುವುದೆಂದು ಸಿಂದ್ರಿ ಫರ್ಟಿಲೈಜರು ಫ್ಯಾಕ್ಟರಿಯು ಅನಿರ್ದಿಷ್ಟಕಾಲ ಲಾಕ್ ಔಟು ಮಾಡಲಾಗಿದೆ.

ಭ್ರಷ್ಟಾಚಾರ ವಿರುದ್ಧ ಒಂದು ತಿಂಗಳಲ್ಲಿ 1900 ದೂರು

ಅಯೂಬರ ವಿರುದ್ಧ

ಡಾಕಾ— ಪಾಕಿಸ್ತಾನ ಅಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷ ಅಯೂಬರ ವಿರುದ್ಧ ವಿರೋಧ ಪಕ್ಷಗಳು ಜಂಟಿಯಾಗಿ ಒಬ್ಬ ಸ್ಪರ್ಧಿಯನ್ನು ನಿಲ್ಲಿಸಲು ನಿರ್ಧರಿಸಿವೆ.

ಮೈಸೂರು— ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಿನ್ನೆ ಟೌನ್‌ಹಾಲ್ ನಲ್ಲಿ ಮಾಡಿದ ಭಾಷಣದಲ್ಲಿ— ಮೈಸೂರು ನಗರಕ್ಕೆ ಹೆಚ್ಚಿನ ಸೌಲಭ್ಯಗಳು ಬೇಕಾದಲ್ಲಿ ಇಲ್ಲಿನ ಜನರು ಶೇಖಡ 20 ರಷ್ಟು ತೆರಿಗೆಯನ್ನಾದರೂ ತೊಡಬೇಕೆಂದರು.

ಅನಾವರಣ

ಮೈಸೂರು— ರಾಷ್ಟ್ರಾಧ್ಯಕ್ಷ ರಾಧಾಕೃಷ್ಣನ್ನರ ಭಾವಚಿತ್ರವನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನಿನ್ನೆ ಬೆಳಿಗ್ಗೆ ಟೌನ್‌ಹಾಲಿನಲ್ಲಿ ಅನಾವರಣ ಮಾಡಿದರು.

★

ಸಿಡುಬು ನಿರೋಧಕ್ಕೆ

ನವದೆಹಲಿ— ಭಾರತದಲ್ಲಿ ಸಿಡುಬು ನಿರೋಧ ಕಾರ್ಯಕ್ಕೆ ಅಮೇರಿಕಾ 7 ಕೋಟಿ ರೂಗಳ ಗ್ರಾಂಟು ಕೊಡಲಿದೆ.

❀

ಸೌಹಾರ್ದ ವ್ಯವಸ್ಥೆ

ಕಾಟ್ಮಂಡು:— ಕೋಸೀ ಪ್ರಾಜೆಕ್ಟಿನಲ್ಲಿ ಮುಳುಗಡೆಯಾಗಿರುವ 13 ನೇಪಾಳಿ ಗ್ರಾಮಗಳ ಪರಿಹಾರ ಬಗ್ಗೆ ಭಾರತ ಮತ್ತು ನೇಪಾಳೀ ಅಡಳಿತಗಾರಂಲ್ಲಿನ ವ್ಯಾಜ್ಯವು ಸೌಹಾರ್ದವಾಗಿ ವ್ಯವಸ್ಥೆಯಾಗಿದೆ.

ನವದೆಹಲಿ— ಕೇಂದ್ರ ಗೃಹ ಮಂತ್ರಿ ಶ್ರೀ ನಂದಾರವರ ಮನೆಯಲ್ಲಿ ತೆರೆಯಲಾಗಿರುವ ಸಂಯುಕ್ತ ಸದಾಚಾರ ಸಮಿತಿಯು ಉಪಕಚೇರಿಯಲ್ಲಿ ಕಳೆದ ಒಂದು ತಿಂಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ಸುಮಾರು 1900 ದೂರುಗಳನ್ನು ಸ್ವೀಕರಿಸಲಾಯಿತು.

★

ಪಾಕಿಸ್ತಾನಿಗಳ ಹಾವಳಿ

ಅಗರ್ತಲ— ತ್ರಿಪುರಾ-ಪೂರ್ವ ಪಾಕ್ ಗಡಿಯಲ್ಲಿ ಭೂಗತಭೂಮಿ ಪಟ್ಟಾ ಭೂಮಿಗೆ 100 ಮಂದಿ ಪಾಕಿಸ್ತಾನಿ ಸಶಸ್ತ್ರ ಗುಂಪಿನವರು ಭಾನುವಾರ ನುಗ್ಗಿ ದನಕರುಗಳು ಮತ್ತಿತರ ಲೂಟಿ ಮಾಡಿದ ಪದಾರ್ಥಗಳೊಡನೆ ಪರಾರಿಯಾದರು.

❀

ರಾಷ್ಟ್ರಾಧ್ಯಕ್ಷರ ಪ್ರವಾಸ

ನವದೆಹಲಿ— ಅಧ್ಯಕ್ಷ ಡಾ|| ರಾಧಾಕೃಷ್ಣನ್ನರು ಸೆಪ್ಟೆಂಬರಿನಲ್ಲಿ ರಷ್ಯಾ ಮುಖ್ಯ ಐದೆಂಡಿಗೆ ಭೇಟಿ ಕೊಡಲಿರುವರು.

....

ಆಹ್ವಾನ

ನವದೆಹಲಿ— ಸಿಲೋನಿನಲ್ಲಿ ಪೌರಕ್ಷವಿಲ್ಲದ ಭಾರತೀಯ ಮೂಲದ ನಿವಾಸಿಗಳ ವಿಷಯದಲ್ಲಿ ಮಾತುಕತೆ ನಡೆಸಲು ಸಿಲೋನು ಪ್ರಧಾನಿ ಸಿರಿಮಾವೋರನ್ನು ಭಾರತ ಪ್ರಧಾನಿ ಶಾಸ್ತ್ರಿಗಳು ಆಹ್ವಾನಿಸಿರುವರು.

.....

ಜಾತಿ ಕಲಹ

ಜಾರ್ಜ್‌ಟೌನು— ಬಲಾವರ್ಗವಾದ ಕ್ಟಿನಲ್ಲಿ ಜಾತೀಯ ಕಲಹವಾಗಿ 3 ಜನ ಸತ್ತರು.

ವಸಂತ ಸಾಹಿತ್ಯ ಸಮ್ಮೇಳನದಲ್ಲಿ

ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಮಾನ್ಯ ಶ್ರೀ ಹೊಂಬೇಗೌಡರು ನುಡಿ

ಬಹು ಮಂದಿ ಕನ್ನಡಿಗರಿಗೆ ತಮ್ಮ ಪೂರ್ವಾತನ ಕವಿಗಳ ಬಗ್ಗೆ ಪರಿಚಯವಿಲ್ಲದಿರುವುದನ್ನು ಪ್ರಸ್ತಾಪಿಸಿ 'ಗದಗ' ನಗರದಲ್ಲಿ ವೀರನಾರಾಯಣನ ಕಿಂಕರನಾಗಿ ಕನ್ನಡ ವರಕವಿ ನಾರಣಪ್ಪನು ಕನ್ನಡ ಭಾರತವನ್ನು ರಚಿಸಿದುದು ಸರಿಯಷ್ಟೆ : ಈ ಕವಿಯು ವೀರನಾರಾಯಣನ ದೇವಾಲಯದಲ್ಲಿ ಕುಳಿತು ಬರೆಯುತ್ತಿದ್ದ ಅಸರೆಯು ಕಂಬವೂ ಇದೆ ; ಆದರೆ ಗದಗಿನ ಜನತೆಯಲ್ಲಿ ಇದರ ಪರಿಜ್ಞಾನವೇ ಇಲ್ಲದುದನ್ನು ನಾನು ಕಂಡೆ '

*

ಅರ್ಧನಾರೀಶ್ವರ

ಸೇಲಂ ಜಿಲ್ಲೆ ತಿರುಚಂಗೋಡಿನಲ್ಲಿ ಒಂದು ಗುಡ್ಡದ ಮೇಲೆ (1000 ಅಡಿ ಎತ್ತರದಲ್ಲಿ) ಇದೆ : ಇದು ಎಲ್ಲಾ ಶಿವದೇವಾಲಯದಲ್ಲಿರುವಂತೆ ಮೂಲದಲ್ಲಿ ಲಿಂಗವಿದೆ ಅರ್ಧನಾರೀಶ್ವರ ವಿಗ್ರಹವಿದೆ ; ಈ ವಿಗ್ರಹವು ಸ್ವಯಂಭುವೆಂದೂ ಪಾರ್ವತಿದೇವಿಯು ತಪಸ್ಸಿಗೆ ಮೆಚ್ಚಿ ಶಿವನು ತನ್ನಲ್ಲಿ ಅರ್ಧಭಾಗವನ್ನು ಆಕೆಗೆ ಕೊಟ್ಟನೆಂದೂ ಹೇಳಲಾಗಿದೆ ; ಇದು ಅರು ಅಡಿ ಎತ್ತರವಿದ್ದು ಸುಂದರವಾಗಿದೆ ; ಸ್ವಾಮಿಯ ಪಾದದ ಕೆಳಗೆ ದೇವತೀರ್ಥದ ಪವಿತ್ರ ನೀರು ಹರಿಯುತ್ತಿದೆ ; ಇದು ಗಂಗಾ ತೀರ್ಥವೆಂದು ಪೂಜಾರಿಗಳು ಹೇಳುತ್ತಾರೆ.

ಈ ಗುಡ್ಡಕ್ಕೆ ನಾಗಗಿರಿ, ಅರ್ಧಗಿರಿ, ಶೇಷಗಿರಿ ಎಂದು ಹೆಸರು : ಭಂಡೆಯು ವೇಲೆ 100 ಅಡಿ ಉದ್ದದಲ್ಲಿ ಒರಗಿಕೊಂಡಿರುವ ಭಾವದಲ್ಲಿ 5 ಹೆಡೆಯ ಸರ್ಪ ಕಲ್ಲಾಗಿದೆ ; ವಾಯುವಿನಿಂದ ತಾಲ್ಪಟ್ಟ ವೀರಗಿರಿಯು ಒಂದು ಭಾಗವು ಈ ಭಂಡೆಯಾಗಿದೆ : ಈ 5 ಹೆಡೆ ಸರ್ಪವು 1000 ಹೆಡೆಯ ಆದಿಶೇಷನ ಒಂದು ಭಾಗವಾಗಿರುವುದೆಂದೂ, ಕಲ್ಲಿನ ವೇಲೆ ಮಲಗಿದ್ದ ಇದು, ಅರ್ಧನಾರೀಶ್ವರ ಸ್ವಾಮಿಯು ದರ್ಶನಕ್ಕಾಗಿ ಬಂದ ಋಷಿಯೊಬ್ಬನನ್ನು ಅಡ್ಡಿಪಡಿಸಲು, ಆತನ ಶಾಪದಿಂದ ಕಲ್ಲಾಯಿತೆಂದೂ ಪುರಾಣಕಥೆ ಈ ನಾಗಗಿರಿಗೆ ಭೇಟಿಯು ಕೈಲಾಸಕ್ಕೆ ಭೇಟಿಕೊಟ್ಟಂತೆಯೂ, ಇಲ್ಲಿಯ ಯಾವ ತೀರ್ಥದಲ್ಲಿ ಸ್ನಾನಮಾಡಿದರೂ ಭಾರತದ ಪವಿತ್ರ ನದಿಗಳ ತೀರ್ಥ ಸ್ನಾನ ಸಮಾನವೆಂದೂ ಹೇಳಲಾಗಿದೆ.

ಭಂಡೆಯು ವೇಲೆರುವ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿನ ಮಧ್ಯದಲ್ಲಿರುವ 60 ಇಂಜಾರು ಹಂತಗಳು, ಕಕ್ಕಿಗಾರರುಗಳ ಸತ್ಕಾರ್ಯವನ್ನು ಪವಿತ್ರತೆಯನ್ನು ಹೊಂದಿದೆ ; ತಿರುಚಂಗೋಡಿನ ಕೋರ್ಟು ಮತ್ತು ಪಂಚಾಯಿತಿಗಳಲ್ಲಿ– ಆ ಪವಿತ್ರ ಹಂತಗಳ ವೇಲೆ ಸೊಡಲಿನಲ್ಲಿ ದೀಪ ಹತ್ತಿಸಿ, ಕರ್ಪೂರದ ಮಂಗಳಾರತಿ ಮಾಡಿ, ಕಕ್ಕಿಗಾರರು ತಮ್ಮ ಹೇಳಿಕೆ ಬಗ್ಗೆ ಪ್ರಮಾಣ ಮಾಡಲು ತಿಳಿಸಲಾಗುತ್ತೆ ; ಆದರೆ ದೇವರ ಕೋಪಕ್ಕೆ ತುತ್ತಾದೇವೆಂಬ ಭಯದಿಂದ ಯಾರೂ ಅಲ್ಲಿ ಸುಳ್ಳುಹೇಳಲು ಧೈರ್ಯಗೊಳ್ಳುವುದಿಲ್ಲ.

ದೇವಾಲಯವು ಶಿಥಿಲವಾಗಿರುವುದರಿಂದ ಅದರ ಪುನರ್ನಿರ್ಮಾಣ ಕಾರ್ಯಕ್ಕೆ ಹಣ ಕೂಡಿಸಲು ಜನರಲ್ಲಿ ಕೋರಿ ಅರ್ಜಿನೆ ಏರ್ಪಡಿಸಲಾಗುತ್ತೆ.

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ಶುಂಬಿತುಳಿ-ಕ.ವ ಪ್ರೇಕ್ಷಕವೃಂದಕ್ಕೆ ಪ್ರದರ್ಶಿತವಾಗುತ್ತಿದೆ

ಷಿಕಾರಿ ★ SHIKARI

ರಾಗಿಣಿ, ಹೆಲ್ಕ, ಅಜಿತ್, ಕೆ ಎಕ್ ಸಿಂಗ್, ಟಿ.ಟಿ.ಕ ಅಭಿನಯಿಸಿರುವ

ರೋಮಾಂಚಕ ಸನ್ನಿವೇಶಗಳಿಂದ, ನೃತ್ಯ ಸಂಗೀತಗಳಿಂದ ಕೂಡಿದ

ಈಸ್ಟ್‌ಮನ್ ಕಲರಿನ ಹಿಂದಿ ಚಿತ್ರ .... [ದಿನವಹಿ 3 ಪ್ರದರ್ಶನಗಳು]

ಆಪೆರಾ— ಅಮೋಘ 4 ನೇ ವಾರ

ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿದೆ

ತುಂಬಿದ ಕೊಡ

ಪಾತ್ರ— ರಾಜಕುಮಾರ್, ಲೀಲಾವತಿ, ಬಾಲಕೃಷ್ಣ, ನರಸಿಂಹರಾಜು, ಜಯಂತಿ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

SHAKTI

SUDHA

Superb Tonic

Help The ' Gorakshana '

**

.... ಪ್ರತಿ ತಿಂಗಳ 1 ತಾ॥ 25 ರಂದು ಪ್ರಕಟಿಸಲ್ಪಡುವುದು ....

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ವಾಣಿಜ್ಯ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

" ಗೋರಕ್ಷಣ " ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ.ಪೈ.

ಅಭಿವಾಂಛಿಗಳು ರೂ 10 (ಒಂದೇ ಸಾರಿ) ಪರಿಪಾಲಕರು ರೂ 25 (ಒಂದೇ ಸಾರಿ)

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4



ಗೋರಕ್ಷಣೆ ಪ್ರಾಣದಯೂ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram Mysore 4